ಸಾಕ್ಷಿಯನ್ನು ಕರೆಸಿ ದಿನಾಂಕಃ 11-01-2022 ರಂದು ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಎನ್.ಎಸ್. ವಕೀಲರಿಂದಃ

ನಾನು ಮುಳಬಾಗಿಲು ಕಂದಾಯ ಇಲಾಖೆಯಲ್ಲಿ ಸುಮಾರು 12 ವರ್ಷಗಳು ಸೇವೆ ಸಲ್ಲಿಸಿದ್ದೇನೆ. ನಾನು ಗ್ರಾಮಲೆಕ್ಕಾಧಿಕಾರಿಯೊಗಿ ಹಾಗೂ 1 ವರ್ಷದ ಅವಧಿಯವರೆಗೆ ಶಾಸಕರ ಪಿ.ಎ ಆಗಿ ಸೇವೆ ಸಲ್ಲಿಸಿದ್ದೇನೆ. ಮುಳಬಾಗಿಲಿನಲ್ಲಿ ಸೇವೆ ಸಲ್ಲಿಸುವ ಅವಧಿಯಲ್ಲಿ 2 ಭಾರಿ ಕರ್ನಾಟಕ ಸರ್ಕಾರಿ ನೌಕರರ ಸಂಘದ ಅಧ್ಯಕ್ಷನಾಗಿ ಆಯ್ಕೆಯಾಗಿದ್ದೆ ಎಂದರೆ ನಿಜ. ದಾವಾ ಸ್ವತ್ತನ್ನು ಸರ್ಕಾರಿ ಸೇವೆಯಲ್ಲಿರುವಾಗ ಖರೀದಿ ಮಾಡಿರುತ್ತೇನೆ ಎಂದರೆ ನಿಜ. ಸ್ವತ್ತನ್ನು ಖರೀದಿ ಮಾಡಲು ನಾನು ನಮ್ಮ ಇಲಾಖೆಯ ಪರವಾನಗಿ ಪಡೆದಿಲ್ಲ ಆದರೆ ವಾರ್ಷಿಕ ಆಸ್ತಿ ಮತ್ತು ಭಾದ್ಯತೆಗಳ ಪಟ್ಟಿಯಲ್ಲಿ ದಾವಾ ಸ್ವತ್ತನ್ನು ತೋರಿಸಿದ್ದೇನೆ





ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ಗೆಜೆಟೆಡ್ ಅಧಿಕಾರಿಯಾದರೆ ಮಾತ್ರ ಪರವಾನಗಿಯ ಅವಶ್ಯಕತೆ ಇರುತ್ತದೆ ಎಂದು ನುಡಿಯುತ್ತಾರೆ. ನಾನು ಈ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮನೆಯ ಮೇಲೆ ಲೋಕಾಯುಕ್ತ ಅಧಿಕಾರಿಗಳ ಧಾಳಿ ನಡೆಸಿದ್ದು ಆ ಕುರಿತು ಪ್ರಕರಣವು ವಿಚಾರಣೆಯ ಹಂತದಲ್ಲಿ ಇದೆ ಎಂದರೆ ನಿಜ.

ಅದೇ ರೀತಿ ಎಸಿಬಿ ಇಲಾಖೆಯವರು ಧಾಳಿ ನಡೆಸಿದ್ದು ಆ ಕುರಿತು ಪ್ರಕರಣವು ವಿಚಾರಣೆಯ ಹಂತದಲ್ಲಿ ಇದೆ ಎಂದರೆ ನಿಜ.

ದಾವಾ ಜಮೀನು ಸರ್ವೇ ನಂ. 60 ರ ಒಟ್ಟು ವಿಸ್ತೀರ್ಣ ಎಷ್ಟು ಇರುತ್ತದೆ ಎಂದು ನನಗೆ ಗೊತ್ತಿಲ್ಲ, ಏಕೆಂದರೆ ಅದು ಗೋಮಾಳ ಜಮೀನು. ನಾನು ಕಸಬಾ ಹೋಬಳಿ ಮಾರಂಡಹಳ್ಳಿ ಗ್ರಾಮದಲ್ಲಿ ಗ್ರಾಮ ಲೆಕ್ಕಾಧಿಕಾರಿಯಾಗಿ ಸೇವೆ ಸಲ್ಲಿಸಿದ್ದೇನೆ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿ ಪ್ರಶ್ನಿಸಲಾಗಿ ಸದರಿ ದಾಖಲೆಯ ಪ್ರಕಾರ ಸರ್ವೇ ನಂ. 60 ರ ವಿಸ್ತೀರ್ಣ 358 ಎಕರೆ 16 ಗುಂಟೆ ಇರುತ್ತದೆ ಎಂದು ನುಡಿಯುತ್ತಾರೆ. ನಾನು ಹುಟ್ಟಿ ಬೆಳೆದಿದ್ದು ಕೀಲಾಗಾಣಿ ಗ್ರಾಮದಲ್ಲಿ ಎಂದರೆ ಸಾಕ್ಷಿಯು ಹುಟ್ಟಿದ್ದು ಕೀಲಾಗಾಣಿ ಗ್ರಾಮದಲ್ಲಿ ಆದರೆ ವಿದ್ಯಾಭ್ಯಾಸ ಮಾಡಿದ್ದು ಬಂಗಾರಪೇಟೆಯಲ್ಲಿ ಎಂದು ನುಡಿಯುತ್ತಾರೆ. ಬಂಗಾರಪೇಟೆಯ 100 ಅಡಿ ಅಂತರದಲ್ಲಿ ಕೀಲಾಗಾಣಿ ಗ್ರಾಮ ಇರುತ್ತದೆ ಎಂದರೆ ನಿಜ. ನಾನು ಗ್ರಾಮಲೆಕ್ಕಾಧಿಕಾರಿಯಾಗಿ ಸೇವೆ ಸಲ್ಲಿಸಿದ್ದರಿಂದ ಸರ್ವೇ ನಂ. 60 ರ ಒಟ್ಟು ವಿಸ್ತೀರ್ಣ ಎಷ್ಟು ಇರುತ್ತದೆ ಎಂದು ನನಗೆ ಖುದ್ದಾಗಿ ಮಾಹಿತಿ ಇರುತ್ತದೆ ಎಂದರೆ ಸರಿಯಲ್ಲ. 358 ಎಕರೆ 16 ಗುಂಟೆ ವಿಸ್ತೀರ್ಣದ ಜಮೀನಿನಲ್ಲಿ ಸ್ವಲ್ಪ ಕ್ಷೇತ್ರವನ್ನು ಸಾರ್ವಜನಿಕರಿಗೆ ಹಂಚಲಾಗಿದ್ದು, ಇನ್ನೂ ಹಲವು ಕ್ಷೇತ್ರ ಗೋಮಾಳ ಜಮೀನು ಇದೆ ಎಂದರೆ ಸಾಕ್ಷಿಯು ಆ ಕುರಿತು ನನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ. ದಾವೆಯನ್ನು ದಾಖಲಿಸುವ ಸಮಯದಲ್ಲಿ ದಾವಾ ಸ್ವತ್ತಿನಲ್ಲಿ 10 ಮಾವಿನ ಮರಗಳು ಇದ್ದವು. ಸಾಕ್ಷಿಯು





ಮುಂದುವರೆದು ಆ ಮರಗಳು ಇರುವ ಸ್ಥಳದಲ್ಲಿ ಐಓಸಿ ಪೈಪ್ ಲೈನ್ ಹಾದುಹೋಗಿದ್ದರಿಂದ ಸದರಿ ಮರಗಳನ್ನು ಕಡಿದು ಹಾಕಲಾಯಿತು ಎಂದು ನುಡಿಯುತ್ತಾರೆ. ಸಾಕ್ಷಿಯು ಮತ್ತೇ ಮುಂದುವರೆದು ಪರಿಹಾರವನ್ನು ಸಹ ತಾನು ಪಡೆದಿರುವುದಾಗಿ ನುಡಿಯುತ್ತಾರೆ. ಐಓಸಿ ಪೈಪ ಲೈನ್‌ನ್ನು ಮೊದಲ ಭಾರಿ 2006 ರಲ್ಲಿ ಮತ್ತು 2ನೇ ಭಾರಿ

2016–17ನೇ ಸಾಲಿನಲ್ಲಿ ಮಾಡಲಾಯಿತು. ದಾವಾ ಸ್ವತ್ತಿನಲ್ಲಿ ಪೈಪ್ ಲೈನ್‌ನ್ನು ಅಳವಡಿಸಿರುವ ಮಾಹಿತಿಯನ್ನು ನಾನು ನನ್ನ ವಕೀಲರಿಗೆ ನೀಡಿಲ್ಲ. ದಾವಾ ಸ್ವತ್ತಿನಲ್ಲಿ ಒಟ್ಟು 40 ಇಂಟು 100 ಅಡಿಯ ಪ್ರದೇಶದಲ್ಲಿ ಪೈಪ್ ಲೈನ್ ಅಳವಡಿಸಲಾಗಿತ್ತು.

ದಾವಾ ಜಮೀನು ಸರ್ವೇ ನಂ. 60 ರಲ್ಲಿ 2 ಎಕರೆ ಮತ್ತು ಅಕ್ಕಪಕ್ಕದ ಜಮೀನುಗಳಲ್ಲಿ ಒಟ್ಟು 4 ಎಕರೆ ಜಮೀನು ನನಗೆ ಸೇರಿರುತ್ತದೆ. ದಾವಾ ಜಮೀನಿನ ಪಶ್ಚಿಮದ ಕಡೆಗೆ ಇರುವ ನನ್ನ ಜಮೀನಿನಲ್ಲಿ ಮಾವಿನ ತೋಟ ಇದೆ ಎಂದರೆ ನಿಜ. ದಾವಾ ಸ್ವತ್ತನ್ನು ತೋರಿಸಿ ಪಶ್ಚಿಮದ ಕಡೆ ಇರುವ 4 ಎಕರೆ ಜಮೀನಿಗೆ ಸಂಬಂಧಿಸಿದಂತೆ ತಂತಿ ಬೇಲಿಯನ್ನು ಅಳವಡಿಸಿದ್ದೀರಾ ಎಂದರೆ ಸಾಕ್ಷಿಯು ಮೂರು ಕಡೆ ತಂತಿ ಬೇಲಿ ಅಳವಡಿಸಿದ್ದು, ಪೂರ್ವದ ಕಡೆ ಬೇಲಿಯನ್ನು ಅಳವಡಿಸಿಲ್ಲ ಎಂದು ನುಡಿಯುತ್ತಾರೆ. ಅಂದರೆ ಸರ್ಕಾರಿ ಗೋಮಾಳದ ಜಮೀನಿನ ಕಡೆ ತಂತಿ ಬೇಲಿಯನ್ನು ಅಳವಡಿಸಿಲ್ಲ. ನ್ಯಾಯಾಲಯದಿಂದ ನಿಯೋಗಿಯನ್ನು ನೇಮಿಸಿ ಸರ್ವೇ ಮಾಡಿಸಲು ನನ್ನದು ಅಭ್ಯಂತರವಿಲ್ಲ. ದಾವಾ ಜಮೀನು ಮತ್ತು ನನಗೆ ಸೇರಿದ ಬೇರೆ ಜಮೀನನ್ನು ಸೇರಿಸಿ ನಾನು ಒಟ್ಟು 15 ರಿಂದ 20 ಎಕರೆ ಜಮೀನಿಗೆ ಸಂಬಂಧಿಸಿದಂತೆ ತಂತಿ ಬೇಲಿಯನ್ನು ಅಳವಡಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಒಂದು ಭಾವಚಿತ್ರವನ್ನು ತೋರಿಸಲಾಗಿ ಅದರಲ್ಲಿ ಅಳವಡಿಸಲಾದ ತಂತಿ ಬೇಲಿಯನ್ನು ತನ್ನ ಜಮೀನಿನ ಪೂರ್ವದ ಕಡೆ ಅಳವಡಿಸಲಾಗಿಲ್ಲ ಎಂದು ನುಡಿಯುತ್ತಾರೆ. ಸದರಿ ಭಾವ ಚಿತ್ರದಲ್ಲಿ ಗೇಟಿನ ಮುಂದಿನ





ಭಾಗದಲ್ಲಿ ಇರುವ ಜಮೀನು ಸಾಕ್ಷಿಯು ತನ್ನದು ಎಂದು ನುಡಿದಿದ್ದರಿಂದ ಸದರಿ ಭಾವಚಿತ್ರವನ್ನು ನಿಡಿ 1 ಎಂದು ಗುರುತಿಸಲಾಯಿತು.

ಕೋರ್ಟ್ ಪ್ರಶ್ನೆ: ನಿಡಿ 1 ರ ಗೇಟ್ ಮುಂಭಾಗದಲ್ಲಿ ನಿಮಗೆ ಸೇರಿದ ಜಮೀನಿನ ಸರ್ವೇ ನಂಬರ್ ಎಷ್ಟು?

ಉತ್ತರಃ ಸರ್ವೇ ನಂ. 60/ಪಿ19.

ನಿಡಿ 1 ರಲ್ಲಿ ತೋರಿಸಿದ ತಂತಿ ಬೇಲಿ ದಾವಾ ಸ್ವತ್ತಿನಲ್ಲಿ ಅಳವಡಿಸಲಾಗಿಲ್ಲ.

ಈ ಹಂತದಲ್ಲಿ ವಕೀಲರು ಮುಂದಿನ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಕ್ತಲೇಖನ ಕೊಟ್ಟು ಓದಿ ನೋಡಿ ಸರಿಪಡಿಸಿ ನಂತರ ಸಹಿ ಮಾಡಲಾಯಿತು)

ಓಹೇಕೇ ಸರಿಯಿದೆ

ಸಹಿ/-

(ಹಾಜಿಹುಸೇನಸಾಬ ಯಾದವಾಡ)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ,ಮುಳಬಾಗಿಲು.